

# ಕೇಶ ಕೌಶಲ್ಯಕ್ಕೆ ಕೈಗಳು ಇರಲೇಬೇಕಿಲ್ಲ!

ಬದುಕಿನಲ್ಲಿ ಸಂಕಷ್ಟಗಳು ಎದುರಾದಾಗ ಹಲವರು ಅದನ್ನು ಧೈರ್ಯದಿಂದ ಎದುರಿಸದೇ ತಮ್ಮ ಜೀವನದ ಹೊಂಗನಸುಗಳನ್ನು ಹೊಸಕಿ ಹಾಕಿ ನಿರಾಶೆಯ ಕೂಪದಲ್ಲಿ ಬಿದ್ದು ಒದ್ದಾಡುತ್ತಾರೆ. ಆದರೆ ಗೇಬ್ರಿಯಲ್ ಹೆರಿಡಿಯಾನ ವಿಷಯವೇ ಬೇರೆ.

ಅರ್ಜೆಂಟೀನಾದ ಗೇಬ್ರಿಯಲ್‌ಗೆ ಈಗ 20 ವರ್ಷ ವಯಸ್ಸು. ಹುಟ್ಟುವಾಗಲೇ ಕೈಗಳೆರಡೂ ಇರದೇ ಹುಟ್ಟಿದ. ಅಂಗಹೀನತೆ ಇದ್ದರೂ ಮನೆಯವರ ಹಾಗೂ ಸ್ನೇಹಿತರ ಬೆಂಬಲದಿಂದ ಬಾಲ್ಯವನ್ನು ಸ್ವತಂತ್ರವಾಗಿ ಸಂತೋಷದಿಂದ ಕಳೆದ. ಓದಿದ ಶಾಲೆಯಲ್ಲಿಯೂ ಸಹ ಗೆಳೆಯರೆಂದೂ ತಾರತಮ್ಯ ತೋರಲಿಲ್ಲ. ಕೇಶವಿನ್ಯಾಸಕಿಯಾಗಿದ್ದ ತಾಯಿಯೇ ಈತನ ಬದುಕಿಗೆ ಬಲು ದೊಡ್ಡ ಸ್ಫೂರ್ತಿ. ಹದಿನಾಲ್ಕರ ಹರೆಯದಲ್ಲೇ ಒಪ್ಪವಾಗಿ ತಲೆಕೂದಲನ್ನು ಕತ್ತರಿಸುವುದು ಹಾಗೂ ದಾಡಿಯನ್ನು ಟ್ರಿಮ್ ಮಾಡುವಿಕೆಯಂತಹ ಕ್ಷೌರಿಕ ವೃತ್ತಿಯ ಕೌಶಲ್ಯಗಳಲ್ಲಿ ಪಾರಂಗತನಾದ. ಮೊದ ಮೊದಲು ಹವ್ಯಾಸಕ್ಕೆಂದು ಕಲಿತ ಈ ವಿದ್ಯೆಯೇ ಮುಂದೆ ಉದ್ಯೋಗಕ್ಕೆ ನಾಂದಿಯಾಯಿತು.

‘ನಾನು ನೀರಿನ ಲೋಟವನ್ನು ಎತ್ತಿ ಕುಡಿಯುತ್ತೇನೆ, ಮೋಟಾರ್ ಬೈಕ್ ಅನ್ನು ರೈಡ್ ಮಾಡುವುದರ ಜೊತೆಗೆ ಕಾರು ಓಡಿಸುವುದನ್ನು ಸಹ ಕಲಿತಿದ್ದೇನೆ’ ಎಂದು ಹೇಳುವ ಗೇಬ್ರಿಯಲ್ ಈಗ ತನ್ನದೇ ಸ್ವಂತ ಸಲೂನ್ ಅನ್ನು ನಡೆಸುತ್ತಿರುವುದರ ಜೊತೆಗೆ ಕ್ಷೌರಿಕ ವೃತ್ತಿಯನ್ನು ಕೈಗೊಳ್ಳಬೇಕೆಂಬ ಇಚ್ಚೆಯುಳ್ಳವರಿಗೆ ಅದರ ತಂತ್ರಗಾರಿಕೆಗಳನ್ನೂ ಕಲಿಸಿಕೊಡುತ್ತಿದ್ದಾನೆ.

‘ತಲೆಕೂದಲನ್ನು ಅಚ್ಚುಕಟ್ಟು ಹಾಗೂ ಸ್ಟೈಲಿಶ್ ಆಗಿ ಕತ್ತರಿಸುವುದನ್ನು ಗಿರಾಕಿಗಳು ಬಹಳವಾಗಿ ಮೆಚ್ಚಿಕೊಳ್ಳುತ್ತಾರೆ, ಇದು ನನಗೆ ಸಂತೋಷವನ್ನು ತರುತ್ತದೆ’ ಎಂದು ನುಡಿಯುವ ಈತ ಹಲವಾರು ಸಮಾಜಮುಖಿ ಕಾರ್ಯಕ್ರಮದಲ್ಲಿಯೂ ತನ್ನನ್ನು ತಾನು ತೊಡಗಿಸಿಕೊಂಡಿದ್ದಾನೆ. ಅಂಗವೈಕಲ್ಯವನ್ನು ಮೆಟ್ಟಿ ನಿಂತು ಕ್ಷೌರಿಕ ವೃತ್ತಿಯಲ್ಲಿ ಬದುಕು ಕಟ್ಟಿಕೊಂಡು ಸಾರ್ಥಕ ಜೀವನವನ್ನು ನಡೆಸುತ್ತಿರುವ ಗೇಬ್ರಿಯಲ್, ಅನೇಕರಿಗೆ ಮಾದರಿಯಾಗಿದ್ದು ಸುಖ ಜೀವನವನ್ನು ನಡೆಸುತ್ತಿದ್ದಾನೆ.

■ ವಿದ್ಯಾ ವಿ. ಹಾಲಭಾವಿ